ಭಡ್ತಿ ಕೊಡುವ ವಿಷಯದಲ್ಲಿ ಅಲ್ಲಿನ ಅಕೌಂಟೆಂಟ್ ಕೆಲಸಕ್ಕೆ ಬಿ.ಕಾಂ. ಪಾಸ್ ಮಾಡಿದವರನ್ನು ನೇಮಕ ಮಾಡುವುದಕ್ಕೆ ಕೇವಲ ಎಸ್. ಎಸ್. ಎಲ್. ಸಿ. ಪಾಸಾದಂಥ ಒಬ್ಬರು ಗುಮಾಸ್ತರನ್ನು ಈ ಹುದ್ದೆಗೆ ನೇಮಕ ಮಾಡಿಕೊಂಡಿರುವುದು ನಿಜವಲ್ಲವೇ ಎಂಬುದನ್ನು ತಾವು ತಿಳಿಸಬೇಕು?

ಶ್ರೀ ಕೆ. ಅಮರನಾಥಶೆಟ್ಟಿ.—ಯಾರನ್ನು ನೇಮಕ ಮಾಡಿಕೊಳ್ಳಲಾಗಿದೆ ಎಂಬ ಬಗ್ಗೆ ಹೆಸರನ್ನು, ಹೇಳಿದರೆ ವಿವರಗಳನ್ನು ಕೊಡಬಹುದು.

ಶ್ರೀ ಜಿ. ರಾಜೂಗೌಡ.—ಮೇಹದೇಶ್ವರ ದೇವಸ್ಥಾನಕ್ಕೆ ಸಂಬಂಧಿಸಿದಂತೆ ಆಲ್ಲಿರತಕ್ಕ ಅಧಿಕಾರಿಗಳು ಸುಮಾರು ೨ ಲಕ್ಷ ರೂಪಾಯಿ ಚಿನ್ನವನ್ನು ಧರ್ಮದರ್ಶಿಗಳಿಗೆ ಗೊತ್ತಿಲ್ಲದಂತೆ ಮಾರಿದುರುಪಯೋಗ ಪಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎರಡನೆಯದಾಗಿ ಅಲ್ಲಿ ಒಂದೇ ಕೋಮಿಗೆ ಸೇರಿದಂಥ ೧೨ ಜನರನ್ನು ಆಪಾಯಿಂಟ್ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಇಷ್ಟೆಲ್ಲಾ ದುರ್ವ್ಯವಹಾರ ಆಗಿರುವುದರಿಂದ ಅದಕ್ಕೆ ಸದನದ ಸಮಿತಿ ಮಾಡಿ ದೂರುಗಳನ್ನು ಪರಿಶೀಲನೆ ಮಾಡುವುದಕ್ಕೆ ಅವಕಾಶಮಾಡಿಕೊಡುತ್ತೀರಾ?

ಶ್ರೀ ಕೆ. ಅಮರನಾಥ ಶೆಟ್ಟಿ.—ಪರಿಶೀಲನೆ ಮಾಡುತ್ತೇನೆ.

Annual Plan of the State for 1987-88

553 SHRI DHARMASINGH (JEWARGI).—Will the Minister for Revenue and planning be pleased to state.

a) whether the planning Department of the State has prepared and published a Draft Annual Plan for the year 1987–88.

b) whether it is a fact that the level of over–all development achieved in different districts based on the composite index of the State have been classified as 'Highly Developed', 'Developed' and 'Backward'and 'Highly Backward.'

c) if so, the clasification assigned to Gulbarga District.

d) the rank of Gulbarga District in the Composite index of development of districts, during 1960–61, 1971–72, 1976–77 and 1985–86.

SRI S. R. BOMMAI.—(Minister for Revenue and Planning).—

a) Yes.

b) Yes.

c) Highly Backward

d)

Year	Rank
1960-61	19
1971-72	19
1976-77	19
1985-86	1[illegible]

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೆ, ಒಂದು ಬಿಟ್ಟರೆ ಮಾನ್ಯ ಮಂತ್ರಿಗಳು ನಾನು ಕೇಳಿದಂಥ ಎಲ್ಲಾ ಪ್ರಶ್ನೆಗಳನ್ನು ಒಪ್ಪಿದ್ದಾರೆ. ಈಗ ಅವರು ಗುಲ್ಬರ್ಗ ಜಿಲ್ಲೆ ಅತಿ ಹಿಂದುಳಿದ ಜಿಲ್ಲೆ ಎಂದು ಒಪ್ಪಿದ್ದಾರೆ. ಇಂಡೆಕ್ಸ್ ರ್ಯಾಂಕಿಂಗ್ ಏನಿದೆ, ಪರ್ ಕ್ಯಾಪಿಟ ಇನ್‌ಕಂ ಅದು ಎಲ್ಲಾ ರೀತಿಯಿಂದಲೂ, ಎಲ್ಲದರಲ್ಲೂ ಗುಲ್ಬರ್ಗ ಜಿಲ್ಲೆ ೧೯೬೦ ರಿಂದ ೧೯೬೬ರವರೆಗೆ ೧೯ನೇ ರ್ಯಾಂಕ್‌ನಲ್ಲಿದೆ. ನೀವು The concept of 5 year plan intended to reduce regional imbalances ತಿಳ್ಸಿಲ್ಲ ಅದರ ಮೇಲೆ ಏನು ಕ್ರಮ ತೆಗೆದುಕೊಂಡಿದೆ? ಎರಡನೆಯದು, ಹೋದಸಲ ಮಾನ್ಯ ಮುಖ್ಯ ಮಂತ್ರಿಗಳು ಗುಲ್ಬರ್ಗ ಜಿಲ್ಲೆಗೆ ಬಂದಾಗ ಅದು ಅತಿ ಹಿಂದುಳಿದ ಪ್ರದೇಶ, ಆ ಭಾಗಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕು ಎಂದು ಅವರನ್ನು ಕೇಳಿಕೊಂಡಾಗ ಅವರು ಎಲ್ಲಾ ಶಾಸಕರ ಸಭೆ ಕರೆಯಿಸುತ್ತೇನೆ, ಎಲ್ಲಾ ಮಾಡುತ್ತೇನೆ ಎಂದು ಆಶ್ವಾಸನೆ ಕೊಟ್ಟಿದ್ದರು. ಕಳೆದ ಅಧಿವೇಶನದಲ್ಲಿ ಒಂದೆರಡು ಸಲ ಆ ಭಾಗಕ್ಕೆ ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಆಗಲಿ ಅಥವಾ ಯಾವುದೇ ವಿಜ್ಞಿಯಂದಾಗಲಿ ಹೆಚ್ಚಿನ ದುಡ್ಡನ್ನು ಕೊಡಬೇಕು ಎಂದು ಪದೇ ಪದೇ ಕೇಳಿಕೊಂಡಾಗ ಪ್ರೈಲ್ಯಾಂಡ್ ಡೆವಲಪ್‌ಮೆಂಟ್ ಮಂತ್ರಿಯಾಂತರ ಹೆಚ್ಚಿನ ಆದ್ಯತೆ ಕೊಡುತ್ತೇವೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದರು. ನಾನು ಮತ್ತು ಮಾನ್ಯ ಖಾರ್ಗೆಯವರು ಹೋದಸಲ ಪ್ರಶ್ನೆ ಕೇಳಿದಾಗ ೧೦೦ ಕೋಟಿ ರೂಪಾಯಿಗಳನ್ನು ಕೇಂದ್ರಸರ್ಕಾರಕ್ಕೆ ಕೇಳಿದ್ದೇವೆ ಎಂದು ಹೇಳಿದ್ದಾರೆ. ಇವತ್ತು ರಾಜ್ಯ ಸರ್ಕಾರ ಕೂಡ ಪ್ಲಾನ್ ಪ್ರಿಪೇರ್ ಮಾಡತಕ್ಕಂಥ ಕಾಲದಲ್ಲಿ ಹೈಲಿ ಬ್ಯಾಕ್‌ವರ್ಡ್ ಡಿಸ್ಟ್ರಿಕ್ಟ್ ಏನಿದೆ ಅದಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕಾಗಿದೆ, ಅದನ್ನು ಇವತ್ತು ಕೊಡುತ್ತಾ ಇಲ್ಲ. ಆದ್ದರಿಂದ ಈ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವು ಏನಿದೆ ಎನ್ನುವುದನ್ನು ಹೇಳಬೇಕು. ರಾಜ್ಯದಲ್ಲಿ ಒಂದು ಕಡೆ ೧೭೦ ಪರ್ಸೆಂಟ್ ಅಭಿವೃದ್ಧಿ ಪ್ರದೇಶ ಇದೆ. ನಮ್ಮ ಗುಲ್ಬರ್ಗ ಜಿಲ್ಲೆ ಅತಿ ಹಿಂದುಳಿದಿದೆ. ಈ ಭಾಗಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಕೊಡುತ್ತಾ ಇಲ್ಲ ಇವತ್ತಿನದಿವಸ ಸದನದಲ್ಲಿ ಪ್ಲಾನಿಂಗ್ ಮಿನಿಸ್ಟರೂ ಕೂಡ ಇದ್ದಾರೆ, ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಇದ್ದಾರೆ. ಅವರು ಇದರ ಬಗ್ಗೆ ಯಾವರೀತಿ ಆದ್ಯತೆ ಕೊಡುತ್ತಾ ಇದ್ದಾರೆ, ಎನ್ನುವ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವನ್ನು ಸಭೆಗೆ ತಿಳಿಸಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಯೋಜನಾ ಇಲಾಖೆಯವರು ಕೆಲವು ವಿಷಯಗಳನ್ನು ಗಮನಕ್ಕೆ ತೆಗೆದುಕೊಂಡು ಆದ್ಯತೆ ಕೊಡುತ್ತಾ ಇದ್ದಾರೆ. ೧೯೬೦—೬೧ ರಿಂದ ೧೯೮೫—೮೬ರವರೆಗೆ ಗುಲ್ಬರ್ಗ ಜಿಲ್ಲೆಯಲ್ಲಿ ಏನೂ ಅಭಿವೃದ್ಧಿಯಾಗಿಲ್ಲ ಎನ್ನುವುದು ಸರಿಯಲ್ಲ. ಹೈಲಿ ಬ್ಯಾಕ್‌ವರ್ಡ್ ಮತ್ತು ಹೈಲಿ ಡೆವಲಪ್ಡ್ ಡಿಸ್ಟ್ರಿಕ್ಟ್‌ನ, ಗುಲ್ಬರ್ಗ ಜಿಲ್ಲೆ ಮತ್ತು ಬೆಂಗಳೂರು ಜಿಲ್ಲೆ. Highly developed district Highly backward district difference in index value 170.11 in 1960-61, ೧೯೭೦-೭೨ರಲ್ಲಿ ಅದು ೧೪೨.೮೭ ರಷ್ಟು ಕಡಿಮೆಯಾಗಿದೆ. ೧೯೭೬—೭೭ರಲ್ಲಿ ಅದು ೧೩೯.೫೯ ರಷ್ಟು ಕಡಿಮೆಯಾಯಿತು. ೧೯೮೫—೮೬ರಲ್ಲಿ ಅದು ಕಡಿಮೆಯಾಗಿರುವುದು ೧೦೪.೯೪. ಹೈಲಿ ಬ್ಯಾಕ್‌ವರ್ಡ್‌ಗೂ ಹೈಲಿ ಡೆವಲಪ್ಡ್‌ಗೂ ಅಂತರ ೧೭೦ ಇದ್ದದ್ದು ೧೦೪ಕ್ಕೆ ಬಂದಿದೆ. ಅದರ ಹಂತಹಂತವಾಗಿ ಈ ಅಂತರ ಕಡಿಮೆಯಾಗುತ್ತಿದೆ. ಇನ್ನೂ ಆಗಬೇಕು. ಈ ಬಗ್ಗೆ ಸರ್ಕಾರ ಆಲೋಚನೆ ಮಾಡಿದೆ. ಜಿಲ್ಲಾಪರಿಷತ್ ಅಸ್ತಿತ್ವಕ್ಕೆ ಬಂದಮೇಲೆ ಸರ್ಕಾರ ಜಿಲ್ಲೆಯ ಜನಸಂಖ್ಯೆ ಮತ್ತು ಜಿಲ್ಲೆಯ ಹಿಂದುಳಿದಿರುವಿಕೆಯನ್ನು ಗಣನೆಗೆ ತೆಗೆದುಕೊಂಡು ಹಣ ಕೊಡತಕ್ಕ ವ್ಯವಸ್ಥೆ ಮಾಡಿದೆ. ಬೇರೆ ಬೇರೆ ಅಳತೆಗಳನ್ನು ಅಳವಡಿಸಿಕೊಂಡು ಅದಕ್ಕನುಗುಣವಾಗಿ ಹಣ ಕೊಡಲಾಗುತ್ತಿದೆ ಇವತ್ತು ಗುಲ್ಬರ್ಗ ಜಿಲ್ಲೆಗೆ ೮೭—೮೮ನೇ ಸಾಲಿಗೆ ೧೪ ಕೋಟಿ ೨೮ ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ. ಹೊಸ ನೇಮಕಾತಿಗೆ ಅನುಗುಣವಾಗಿ ೧೭.೧೩ ಕೋಟಿ ರೂಪಾಯಿಗಳನ್ನು ಕೊಡಲಾಗಿದೆ. ಮೂರು ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಕೊಡಲಾಗಿದೆ. ಬೆಂಗಳೂರು, ಮೈಸೂರು, ಮಂಡ್ಯ, ದಕ್ಷಿಣ ಕನ್ನಡ ಜಿಲ್ಲೆ, ಕೊಡಗು ಹಾಗೂ ಚಿಕ್ಕಮಗಳೂರು ಜಿಲ್ಲೆಗೆ ಅಷ್ಟೇ ಹಣ ಇದೆ. ಬೆಂಗಳೂರು ಜಿಲ್ಲೆಗೆ ೧೦ ಕೋಟಿ, ಮೈಸೂರು ಜಿಲ್ಲೆಗೆ ೧೭ ಕೋಟಿ ಕೊಡಲಾಗಿದೆ. ಗುಲ್ಬರ್ಗ ಮತ್ತು ರಾಯಚೂರು ಹಾಗೂ ಬೀದರ್ ಜಿಲ್ಲೆಗಳಿಗೆ ಹೆಚ್ಚಿನ ಹಣದ ಸಹಾಯ ಮಾಡಲಾಗಿದೆ. ಅದನ್ನು ಮುಂದುವರಿಸಿಕೊಂಡು ಹೋಗಲಾಗುವುದು.

ಶ್ರೀ ಧರ್ಮಸಿಂಗ್.—ಪ್ರಸ್ತುತ ಹಣ ಏನು ಒದಗಿಸುತ್ತಿದ್ದೀರಿ ಇದರಿಂದ ಏನೂ ಸುಧಾರಣೆ ಯಾಗುವುದಿಲ್ಲ. ಹಿಂದೆ ಫ್ಯಾಕ್ಟ್ ಫೈಂಡಿಂಗ್ ಕಮಿಟಿಯಂವರು ಕೂಡ ರಿಪೋರ್ಟ್ ಕೊಟ್ಟಿದ್ದಾರೆ. ೧೯೮೫ರಲ್ಲಿ ರಚಿಸಿದ ಸರ್ಕಾರ ಹೈದರಾಬಾದ್ ಕರ್ನಾಟಕವನ್ನು ಅಭಿವೃದ್ಧಿ ಪಡಿಸುವ ದೃಷ್ಟಿಯಿಂದ

ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡು ಎಂದು ಮಾಡಿ, ಹತ್ತು ವರ್ಷಗಳ ಅವಧಿಯಲ್ಲಿ ಸುಮಾರು ೩೫೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ತಿಳಿಸಲಾಗಿತ್ತು. ತಾವು ಕೂಡ ಇದೇ ಸಭೆಯಲ್ಲಿ ಹೇಳಿದ್ದೀರಿ. ಇವತ್ತು ನೀವು ೧೦೦ ಕೋಟಿ ರೂಪಾಯಿಗಳನ್ನು ರಾಯಚೂರು, ಗುಲ್ಬರ್ಗ ಹಾಗೂ ಬೀದರ್ ಜಿಲ್ಲೆಗಳಿಗೆ ಕೊಟ್ಟರೆ ಹೊಸದಾಗಿ ಯಾವ ಕೆಲಸಗಳನ್ನೂ ತೆಗೆದು ಕೊಳ್ಳುವುದಕ್ಕಾಗುವುದಿಲ್ಲ. ಈ ವಿಚಾರವನ್ನು ಮಾನ್ಯ ಮುಖ್ಯ ಮಂತ್ರಿಗಳ ಎದುರುಗಡೆ ಹೇಳಿದ್ದೇವೆ. ಚಿಕ್ಕಮಗಳೂರಂ, ಹಾಸನ ಜಿಲ್ಲೆಗಳು ಈಗಾಗಲೇ ಅಭಿವೃದ್ಧಿ ಹೊಂದಿವೆ. ರಾಜ್ಯ ಸರ್ಕಾರದ ಆದ್ಯತೆ ಮೇರೆಗೆ ನಮ್ಮ ಭಾಗಕ್ಕೆ ಹಣ ಕೊಡಬೇಕು. ಇದರ ಬಗ್ಗೆ ತಾವು ಸ್ಪಷ್ಟವಾಗಿ ತಿಳಿಸಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಜಿಲ್ಲಾ ಪರಿಷತ್ ಉದಾಹರಣೆ ಕೊಟ್ಟಿದ್ದೇನೆ. ನೀರಾವರಿಗೂ, ರಸ್ತೆಗಳ ಕಾರ್ಯಕ್ಕೂ ಹೆಚ್ಚು ದುಡ್ಡು ಕೊಟ್ಟಿದ್ದೇವೆ. ಎಲ್ಲದಕ್ಕಿಂತಲೂ ಮುಖ್ಯವಾಗಿ ಕೇಂದ್ರ ಸರ್ಕಾರಕ್ಕೂ ಯೋಜನಾ ಆಯೋಗಕ್ಕೂ ಪತ್ರವನ್ನು ಬರೆದು ಹಿಂದುಳಿದ ಪ್ರದೇಶಗಳು ಅಭಿವೃದ್ಧಿಯಾಗಬೇಕಾದರೆ ಅವರು ವಿಶೇಷ ಗಮನ ಕೊಡಬೇಕು ಎಂದು ತಿಳಿಸಿದ್ದೇವೆ. ಆಂಧ್ರದಲ್ಲಿ ತೆಲಾಂಗಣ ಅಭಿವೃದ್ಧಿಗೆ ಗಮನ ಕೊಟ್ಟಂತೆ, ಬಂಗಾಳದಲ್ಲಿ ಸುಂದರ್‌ಬಂದ್‌ಗೆ ಗಮನ ಕೊಟ್ಟಂತೆ, ಯೋಜನೆ ಕೈಗೊಳ್ಳಬೇಕೆಂದು ತಿಳಿಸಿದ್ದೇವೆ. ಈ ಯೋಜನೆಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಅರ್ಧರ್ಧ ಹಣ ಕೊಡಬೇಕು.

ಶ್ರೀ ಧರ್ಮಸಿಂಗ್.—ಗುಲ್ಬರ್ಗ, ಬೀದರ್, ಬಳ್ಳಾರಿ ರಾಯಚೂರು ಭಾಗದ ಶಾಸಕರುಗಳನ್ನು ಕರೆದು ಇದರ ಬಗ್ಗೆ ಮಾತನಾಡೋತ್ತೇವೆಂದೂ ಹಿಂದೆ ತಿಳಿಸಿದ್ದಿರಿ. ಇದುವರೆವಿಗೂ ಸಭೆ ಕರೆದಿಲ್ಲ. ಕೇಂದ್ರ ಸರ್ಕಾರಕ್ಕೂ ಮನವಿ ಮಾಡಿ. ರಾಜ್ಯ ಸರ್ಕಾರ ಎಷ್ಟರಮಟ್ಟಿಗೆ ಆದ್ಯತೆ ಕೊಟ್ಟಿದೆ ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಅಧಿವೇಶನದಲ್ಲಿಯೇ ಸಭೆ ಕರೆಯುತ್ತೇನೆ.

ಮೂರನೆಯ ಹಿಂದುಳಿದ ವರ್ಗಗಳ ಆಯೋಗ

೨೯೯. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ),—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಿಂದುಳಿದ ವರ್ಗದವರ ಬಗ್ಗೆ ಮೂರನೇ ಆಯೋಗವನ್ನು ರಚಿಸುವ ಆಲೋಚನೆಯು ಸರ್ಕಾರದವರಲ್ಲಿದೆಯೇ ;

ಆ) ಹಾಗಿದ್ದಲ್ಲಿ, ಇದುವರೆವಿಗೂ ಆಯೋಗವನ್ನು ರಚಿಸದಿರಲು ಕಾರಣಗಳೇನು ಮತ್ತು ಯಾವಾಗ ರಚಿಸಲಾಗುವುದು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಹೌದು.

ಆ) ಹಿಂದುಳಿದ ವರ್ಗಗಳ ೩ನೇ ಆಯೋಗವನ್ನು ರಚಿಸಲು ಈಗಾಗಲೇ ಕ್ರಮ ತೆಗೆದುಕೊಳ್ಳಲಾಗಿದೆ. ಈ ಬಗ್ಗೆ ಶೀಘ್ರವಾಗಿ ಆದೇಶ ಹೊರಡಿಸಲಾಗುವುದು.

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೆ, ವೆಂಕಟಸ್ವಾಮಿ ಆಯೋಗದ ವರದಿಯನ್ನು ಈ ಸರ್ಕಾರ ಕೈಬಿಟ್ಟ ಮೇಲೆ ಅತಿಶೀಘ್ರವಾಗಿ ಹಿಂದುಳಿದ ವರ್ಗಗಳ ೩ನೇ ಆಯೋಗವನ್ನು ನೇಮಕ ಮಾಡುತ್ತೇವೆಂದು ಹೇಳಿದ್ದರು. ಈಗ ಸುಮಾರು ಮೂರು ವರ್ಷ ಕಳೆದರೂ ಇದುವರೆಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಈ ಕೆಲಸ ಇಷ್ಟು ವಿಳಂಬವಾಗಲಿಕ್ಕೆ ಕಾರಣ ಏನು ಎಂದು ಕೇಳಿದ್ದಕ್ಕೆ ಅದರ ಬಗ್ಗೆ ವಿವರ ಇಲ್ಲ. ಇನ್ನು ಎಷ್ಟು ದಿವಸದಲ್ಲಿ ಈ ಆಯೋಗವನ್ನು ನೇಮಕ ಮಾಡುತ್ತೀರಿ ಎಂದು ಸ್ಪೆಸಿಫಿಕ್ ಟೈಂ ಕೇಳಿದರೆ ಉತ್ತರ ಹೇಳಿಲ್ಲ ಈಗ ಈ ಸರ್ಕಾರ ಈ ನೇಮಕದ ಬಗ್ಗೆ ಮಾಡುತ್ತಿರುವ ವಿಳಂಬವನ್ನು ನೋಡಿದರೆ ಇನ್ನು ಎರಡು ವರ್ಷಗಳಾದರೂ ಇದು ಆಗುವುದಿಲ್ಲ ಎಂದು ಕಾಣುತ್ತದೆ. ಆದರೆ ಜನೋತ್ಸವ ಮಾತ್ರ ಎಂಟು ದಿವಸಗಳಲ್ಲಿಯೇ ನಡೆದುಹೋಯಿತು. ಹಿಂದುಳಿದ ವರ್ಗಗಳ ಆಯೋಗ ಈ ರಾಜ್ಯದಲ್ಲಿ